**Crl.Misc No.**157/ 2019

**RW** : 1

**ದಿನಾಂಕಃ 06-12-2025 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಅರ್ಜಿದಾರರ ಪರವಾಗಿಃ ಶ್ರೀ ಕೆ.ಆರ್.ಎಮ್ ವಕೀಲರಿಂದಃ**

1. 2015 ರಲ್ಲಿ ನನ್ನ ವೇತನ ಎಷ್ಟಿತ್ತು ಎಂದು ನನಗೆ ಗೊತ್ತಿಲ್ಲ. ಬಹುಶಃ 35,000/- ರೂಪಾಯಿಗಿಂತ ಕಡಿಮೆ ಇದ್ದಿರಬಹುದು. 2019 ರಲ್ಲಿ ನನ್ನ ವೇತನ ಎಷ್ಟಿತ್ತು ಎಂದು ನನಗೆ ನೆನಪಿಲ್ಲ. ನನ್ನ ತಂದೆ-ತಾಯಿಗೆ ನಾವು ಒಟ್ಟು 4 ಜನ ಮಕ್ಕಳು. ನನ್ನ ತಂದೆ-ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ನನಗೆ ಎಷ್ಟು ಇದೆಯೋ ಅಷ್ಟೇ ಜವಾಬ್ದಾರಿ ನನ್ನ ಸಹೋದರ-ಸಹೋದರಿಯರಿಗೂ ಸಹ ಇದೆ ಎಂದರೆ ಸರಿ.

2. ಕ್ರಿಮಿಸ್ ಸಂಖ್ಯೆ 170/2019 ರಲ್ಲಿ ನಾನು ತಕರಾರನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣದಲ್ಲಿ ತಕರಾರು ಸಲ್ಲಿಸಲು ನಿಮಗೆ ಏನಾದರು ತೊಂದರೆ ಇತ್ತಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ತಾಯಿಗೆ ಜೀವನಾಂಶ ಕೊಡಲು ನಾನು ಬಾಧ್ಯಸ್ತನಿದ್ದ ಕಾರಣ ನಾನು ಸದರಿ ಪ್ರಕರಣದಲ್ಲಿ ತಕರಾರು ಸಲ್ಲಿಸಿರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ನನ್ನ ತಾಯಿಗೆ ಜೀವನಾಂಶ ಕೊಡಲು ನಾನು ಹೇಗೆ ಬಾಧ್ಯಸ್ತನಿದ್ದೇನೆಯೋ ಅದೇ ರೀತಿ ಅರ್ಜಿದಾರರಿಗೂ ಸಹ ನಾನು ಜೀವನಾಂಶ ಕೊಡಲು ಬಾಧ್ಯಸ್ತನಿರುತ್ತೇನೆ ಎಂದರೆ ಸರಿ.

3. ನಾನೇ ನನ್ನ ತಾಯಿಯ ಮೂಲಕ ಕ್ರಿಮಿಸ್ ಸಂಖ್ಯೆ 170/2019 ರ ಪ್ರಕರಣವನ್ನು ಹೂಡಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕಾರಣದಿಂದಲೇ ಕ್ರಿಮಿಸ್ ಸಂಖ್ಯೆ 170/2019 ರ ಪ್ರಕರಣದಲ್ಲಿ ನನ್ನ ಸಹೋದರ ಮತ್ತು ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು, ನನ್ನ ತಂದೆ-ತಾಯಿಗೆ ನಾವು 4 ಜನ ಮಕ್ಕಳಿದ್ದು, ಅವರ ಪೈಕಿ ಒಬ್ಬ ಮಗ ಮರಣ ಹೊಂದಿದ್ದು, ಇನ್ನೊಬ್ಬ ಮಗನಿಗೆ ಹೃದಯ ಸಂಬಂಧಿ ಕಾಯಿಲೆ ಮತ್ತು ಪಾಶ್ವವಾಯು ಆಗಿದ್ದು, ನಮ್ಮ ಸಹೋದರಿ ಹಲವಾರು ವರ್ಷಗಳ ಹಿಂದೆ ಹೋಗಿರುವ ಕಾರಣ ಕ್ರಿಮಿಸ್ ಸಂಖ್ಯೆ 170/2019 ರ ಪ್ರಕರಣದಲ್ಲಿ ನನ್ನ ಇತರ ಸಹೋದರ ಮತ್ತು ಸಹೋದರಿಯರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ.

4. ನಿಮ್ಮ ಸಹೋದರನಿಗೆ ಪಾಶ್ವವಾಯು ಕಾಯಿಲೆ ಇದೆ ಎಂದು ತೋರಿಸಲು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ತಮ್ಮ ಪಾಶ್ವವಾಯು ಕಾಯಿಲೆಗೆ ನನ್ನ ಸಹೋದರ ನಾಟಿ ಔಷಧಿ ಪಡೆಯುತ್ತಿರುವ ಕಾರಣ ಅದರ ಸಂಬಂಧ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ಆಗಿರುವುದಿಲ್ಲ. ನನ್ನ ಸಹೋದರನಿಗೆ ಹೃದಯ ಸಂಬಂಧಿ ಕಾಯಿಲೆ ಮತ್ತು ಪಾಶ್ವವಾಯು ಕಾಯಿಲೆ ಇದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

5. ನಿಮ್ಮ ತಾಯಿಯನ್ನು ಯಾರು ನೋಡಿಕೊಳ್ಳುತ್ತಿದ್ದಾರೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ನನ್ನ ತಾಯಿ ಒಬ್ಬರೇ ಬೇರೆಯಾಗಿ ಸಾಲಿಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದು ನುಡಿದಿರುತ್ತಾರೆ. ನನಗೆ ಈಗ ತಿಂಗಳಿಗೆ 60,000/- ರೂಪಾಯಿ ಸಂಬಳವಿದೆ. ನನ್ನ ಪ್ರಸ್ತುತ ಸಂಬಳ ಎಷ್ಟು ಇದೆ ಎಂದು ತೋರಿಸಲು ನನ್ನ ನವೆಂಬರ್ -2025 ರ ವೇತನ ಪ್ರಮಾಣ ಪತ್ರವನ್ನು ನನಗೆ ಹಾಜರುಪಡಿಸಲು ಸಾಧ್ಯವಿಲ್ಲ. ನನ್ನ ವೇತನ ಪ್ರಮಾಣ ಪತ್ರ ನನಗೆ ಸಿಗುವುದಿಲ್ಲ. ನನ್ನ ತಿಂಗಳ ವೇತನ 93,630/- ರೂಪಾಯಿ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. 93,630/- ರೂಪಾಯಿಯ ಪೈಕಿ 3,000/- ರೂಪಾಯಿ ಕಡಿತಗೊಳ್ಳುತ್ತದೆ ಎಂದರೆ ಸಾಕ್ಷಿಯು ಅದಕ್ಕಿಂತ ಜಾಸ್ತಿ ಹಣ ಕಡಿತಗೊಳ್ಳುತ್ತದೆ ಎಂದು ಸಾಕ್ಷಿಯು ನುಡಿದಿರುತ್ತಾರೆ. ಸದರಿ 3,000/- ರೂಪಾಯಿ ಕಡಿತಗೊಂಡ ನಂತರ 83,400/- ರೂಪಾಯಿ ವೇತನ ನನ್ನ ಖಾತೆಗೆ ಜಮಾ ಗೊಳ್ಳುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಎಲ್ಲಾ ಕಡಿತಗಳು ಕಳೆದ ನಂತರ ನನಗೆ ಕೇವಲ 72,000/- ರೂಪಾಯಿ ವೇತನ ಕೈ ಸಿಗುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

6. ಕ್ರಿಮಿಸ್ ಸಂಖ್ಯೆ 22/2015 ರಲ್ಲಿ ಅಂತಿಮ ಆದೇಶ ಆದಾಗ ನನ್ನ ತಿಂಗಳ ಸಂಬಳ 26,550/- ರೂಪಾಯಿ ಇತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. 2 ನೇ ಅರ್ಜಿದಾರರು ತಮ್ಮ ಎಂ.ಎಸ್.ಸಿ. ವಿದ್ಯಾಭ್ಯಾಸ ಮುಗಿಸಿ ಈಗ ಬಿ.ಎಡ್. ಪದವಿ ಕಲಿಯುತ್ತಿದ್ದಾರೆ ಎಂದರೆ ಸಾಕ್ಷಿಯು 2 ನೇ ಅರ್ಜಿದಾರರು ತಮ್ಮ ಸಂಪೂರ್ಣ ವಿದ್ಯಾಭ್ಯಾಸ ಮುಗಿಸಿ ಈಗ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ಸಾಕ್ಷಿಯು ನುಡಿದಿರುತ್ತಾರೆ.

7. ಎಂ.ಎಸ್.ಸಿ ಪದವಿ ಮಾಡಲು ಹಾಸ್ಟೆಲ್ ಶುಲ್ಕ ಸಮೇತ ಒಂದು ವರ್ಷಕ್ಕೆ 3 ರಿಂದ 4 ಲಕ್ಷ ರೂಪಾಯಿ ಖರ್ಚಾಗುತ್ತದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2 ನೇ ಅರ್ಜಿದಾರರ ಹಾಸ್ಟೆಲ್ ಶುಲ್ಕವನ್ನು ನಾನೇ ಭರಿಸಿರುತ್ತೇನೆ ಎಂದು ಸ್ವತಃ ನುಡಿದಿರುತ್ತಾರೆ. 2 ನೇ

ಅರ್ಜಿದಾರರು ಹಾಸ್ಟೆಲ್ ನಲ್ಲಿ ಇರಲಿಲ್ಲ ಬದಲಾಗಿ ಪಿ.ಜಿ.ಯಲ್ಲಿದ್ದು, ಅವರ ಪಿ.ಜಿಯ ಶುಲ್ಕವನ್ನು ನಾನೇ ಭರಿಸಿದ್ದು, ಶುಲ್ಕ ಭರಿಸಿದಕ್ಕೆ ಪಿ.ಜಿ ಯವರು ಯಾವುದೇ ರಸೀದಿ ಕೊಡುವುದಿಲ್ಲ. ನಾನು 2 ನೇ ಅರ್ಜಿದಾರರ ಹಾಸ್ಟೆಲ್ ಅಥವಾ ಪಿ.ಜಿ ಶುಲ್ಕವನ್ನು ಭರಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

8. 2015 ರಿಂದ ಇಲ್ಲಿಯವರೆಗೆ ದಿನನಿತ್ಯದ ವಸ್ತುಗಳ ಬೆಲೆಯು ಜಾಸ್ತಿ ಆಗಿರುತ್ತದೆ ಎಂದರೆ ಸಾಕ್ಷಿಯು ತುಂಬಾ ಅತೀಯಾಗಿ ಜಾಸ್ತಿ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ. 2015 ರಲ್ಲಿ ಇದ್ದ ವಿದ್ಯಾಭ್ಯಾಸದ ಖರ್ಚಿಗಿಂತ 2019 ರಿಂದ ವಿದ್ಯಾಭ್ಯಾಸದ ಖರ್ಚು ಹೆಚ್ಚಾಗಿರುತ್ತದೆ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಹೆಚ್ಚಿನ ಜೀವನಾಂಶ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಅರ್ಜಿದಾರರ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ**
**ನ್ಯಾಯಾಧೀಶರು ಕೆ.ಆರ್.ನಗರ**